



ಜೈನ ತೀರ್ಥಂಕರರು ಮತ್ತು ದೇವತೆಗಳ ಕೆತ್ತನೆ.



ವಿಸ್ತಾರವಾದ ಪಂಚಗುಹೆಗಳು

ರಾಜವೈಭವದ ಚಿತ್ರಣ ದೊರಕುವುದಲ್ಲದೇ, ಜೈನರ ಪವಿತ್ರ ಮಂತ್ರವಾದ 'ಣಮೋ'ಕಾರ ಮಂತ್ರದಿಂದ ರಾಜನನ್ನು ವರ್ಣಿಸುವ ವಿವರಗಳಿವೆ. ಆ ಶಾಸನಗಳು ಬ್ರಾಹ್ಮಿ ಲಿಪಿಯಲ್ಲಿ ಹದಿನೇಳು ಸಾಲಿನಲ್ಲಿ ಕೆತ್ತನೆಗೊಂಡಿವೆ.


'ಖಂಡಗಿರಿ' ಬೆಟ್ಟದ ಮೂರನೆಯ ಗುಹೆಯಾದ 'ಅನಂತ ಗುಹೆ' ಬಹಳ ಪ್ರಾಮುಖ್ಯವಾದುದು. ಗುಹೆಯ ಮುಂಭಾಗದಲ್ಲಿ ಎರಡು ಹಾವುಗಳ ಚಿತ್ರಗಳಿದ್ದು, ಅದರಿಂದಾಗಿಯೇ ಅವುಗಳಿಗೆ 'ಅನಂತ ಗುಹೆ' ಎಂದು ಕರೆಯಲಾಗುತ್ತಿದೆ. ಆ ಗುಹೆಯಲ್ಲಿ ಗೋಡೆಗಳ ಮೇಲೆ ಹೆಂಗಸರು, ಮಕ್ಕಳು, ಕ್ರೀಡಾಳುಗಳು, ಸಿಂಹ, ಎತ್ತು, ಮತ್ತಿತರ ಪ್ರಾಣಿಗಳ ಚಿತ್ರಣವನ್ನು ಕಾಣಬಹುದು. 7ನೇ ಗುಹೆಯಾದ ನವಮುನಿ ಗುಹೆಯಲ್ಲಿ 9 ಜೈನ ತೀರ್ಥಂಕರರನ್ನು ಕಂಡರೆ, ಬಾರಬುಜಿ ಗುಹೆಯಲ್ಲಿ ಹನ್ನೆರಡು ಆಯುಧಗಳನ್ನು ಹೊಂದಿದ ಶಾಸನ ದಿನದ ಪ್ರತಿಕೃತಿಯನ್ನು ಕೆತ್ತಿದ್ದಾರೆ.

ಪ್ರತಿ ಗುಹೆಗೂ ಸಂಖ್ಯೆಯನ್ನು ನೀಡಿ, ಗುಹೆಯ ಹೆಸರನ್ನು ಭಾರತೀಯ ಪುರಾತತ್ವ ಇಲಾಖೆ ಫಲಕಗಳ ಮೂಲಕ ಪ್ರವಾಸಿಗರಿಗೆ ಮಾಹಿತಿ ನೀಡುವ ಕೆಲಸವನ್ನು ಮಾಡಿದೆ. ಉದಯಗಿರಿಯಲ್ಲಿ ಗುಹೆ 1 'ಜಯವಿಜಯ ಗುಹೆ', ಗುಹೆ 2 'ಅಶೋಕಪುರಿ ಗುಹೆ', ಗುಹೆ 3 'ಚಾರೋಂ ಹಾತ್ ಗುಹೆ' — ಈ ರೀತಿಯಾಗಿ ಉದಯಗಿರಿ ಬೆಟ್ಟದಲ್ಲಿ 18 ಗುಹೆಗಳಿದ್ದರೆ, ಖಂಡಗಿರಿಯಲ್ಲಿ 15 ಪ್ರಮುಖ ಗವಿಗಳು ಸೇರಿದಂತೆ ಒಟ್ಟು 33 ಗವಿಗಳಿವೆ. ಆ ಗವಿಗಳಲ್ಲಿ ಚಿತ್ರಕಲೆ, ಆಸ್ಥಾನದ ಚಿತ್ರಣಗಳು, ಮತ್ತು ರಾಜ ವೈಭವಗಳನ್ನು ಉಬ್ಬು ಶಿಲ್ಪಗಳ ಮೂಲಕ ಕೆತ್ತಲಾಗಿದೆ. ಅಲ್ಲಿ ದೊರೆತ ಶಾಸನಗಳ ಪ್ರಕಾರ, ಅದು ಒಂದನೇ ಶತಮಾನದಲ್ಲಿ ರಾಜ ಖರವೇಲನ ಆಳ್ವಿಕೆಯಲ್ಲಿ ಜೈನ ಮುನಿಗಳು ಕೆತ್ತಿರುವುದಾಗಿಯೂ ಮತ್ತು ಇವುಗಳನ್ನು 'ಲೆನ' ಎಂದು ಕರೆಯಲ್ಪಟ್ಟದ್ದಾಗಿ ತಿಳಿದು ಬರುತ್ತದೆ.

ಅವುಗಳಿಗೆ ಪೂರಕವಾಗಿರುವಂತೆ ಕೆಲವು ಕಿ.ಮೀ.ಗಳ ದೂರದಲ್ಲಿ ಧೌಲಿ ಎಂಬ ಸ್ಥಳದಲ್ಲಿ ಸಾಮ್ರಾಟ ಅಶೋಕನ ಕಾಲದ–ನಿರ್ಮಾಣದ ದೊಡ್ಡ ಸ್ತೂಪವಿದೆ. ಅಲ್ಲಿ ಬುದ್ಧ ಮಲಗಿರುವ ಶೈಲಿಯಲ್ಲಿ ವಿಗ್ರಹವಿದೆ.

ಖಂಡಗಿರಿ ಬೆಟ್ಟದಲ್ಲಿ ಕೆಲವು ಕೋತಿಗಳಿವೆ. ಅವುಗಳನ್ನು ನೋಡಿ ಭಯಪಡಬೇಕಿಲ್ಲ. ಅವುಗಳಿಗೆ ಪ್ರವಾಸಿಗರು ಕಡಲೇಕಾಯಿ ನೀಡಿದರೆ ಅವುಗಳು ಕೂಡಾ ನಮ್ಮೊಂದಿಗೆ ಫೋಟೋಗೆ ಪೋಸು ನೀಡುತ್ತದೆ. ಹಾಗೆ ಅವುಗಳಿಗೆ ತರಬೇತಿ ನೀಡಿರುವುದುಂಟು. ಖಂಡಗಿರಿ ಬೆಟ್ಟಕ್ಕೆ ಸುಮಾರು 150 ಮೆಟ್ಟಿಲುಗಳನ್ನು ಹತ್ತಿ ಹೋಗಬೇಕಿದೆ. ಅಲ್ಲಿ ಬೆಟ್ಟದ ನಡುವಿನ ಒಂದು ಗುಹೆಯಲ್ಲಿ ಹನುಮಾನ್ ದೇವಾಲಯವೂ ಇದೆ. ಮತ್ತೆ ಮುಂದೆ ಸುಮಾರು ನೂರು ಮೆಟ್ಟಿಲುಗಳನ್ನು ಹತ್ತಿ ಹೋದರೆ ಜೈನ ಮಂದಿರವೂ ಉಂಟು.

ಭುವನೇಶ್ವರಕ್ಕೆ ಭೇಟಿ ನೀಡುವ ಪ್ರವಾಸಿಗರು ಪುರಿ ಜಗನ್ನಾಥ, ಕೊನಾರ್ಕ ಸೂರ್ಯ ದೇವಾಲಯ ಮತ್ತು ಚಂದ್ರಭಾಗ ಸಮುದ್ರ ತೀರದ ಜೊತೆಗೆ ಈ ಜೋಡಿ ಗುಹೆಗಳನ್ನೂ ತಮ್ಮ ಪ್ರೇಕ್ಷಣೀಯ ಪಟ್ಟಿಯಲ್ಲಿ ಸೇರಿಸಿಕೊಳ್ಳಬಹುದಾಗಿದೆ. ■



ಉದಯಗಿರಿ ಶಿಖರದ ತುದಿಯಲ್ಲೊಂದು ಗುಹೆ.